518

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ರವರ ನಿಯಮ 72 ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.**

**ಸೂಚನೆ**

ಶ್ರೀ ಬಶೆಟ್ಟಪ್ಪ ಬಸವಣ್ಣಪ್ಪ ಅಂಗಡಿ, ಹರ್ಲಾಪುರ ಕೊಡ್ಲಮಠ, ಕುಂದಗೋಳ ತಾಲ್ಲೂಕು, ಧಾರವಾಡ ಜಿಲ್ಲೆ ಗ್ರಾಮ ಭಾರತಿ ಶಿಕ್ಷಣ ಸಮಿತಿ ಕಡ್ಡಾಯ ಸೇವೆಯಿಂದ ಬಿಡುಗಡೆಗೊಂಡಿದ್ದು, ಸದರಿಯವರಿಗೆ ನೌಕರಿ/ಪರಿಹಾರ ನೀಡುವ ಕುರಿತು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದು.

**ಉತ್ತರ**

ಶ್ರೀ ಬಶೆಟ್ಟಪ್ಪ ತಂದೆ ಬಸವಣ್ಣಪ್ಪ ಅಂಗಡಿ, ಸಹ ಶಿಕ್ಷಕರು, ಜ್ಞಾನ ಭಾರತಿ ಶಿಕ್ಷಣ ಸಮಿತಿ ಶಿಗ್ಲಿ, ಶಿರಹಟ್ಟಿ ತಾಲ್ಲೂಕು, ಗದಗ ಜಿಲ್ಲೆ ಇಲ್ಲಿನ ಎಸ್.ಎಸ್. ಕೂಡ್ಲಮಠ, ಪ್ರೌಢಶಾಲೆಯಲ್ಲಿ ಸಹ ಶಿಕ್ಷಕರ ಹುದ್ದೆಗೆ ದಿನಾಂಕ:31/05/2003ರಂದು ನೇಮಕಾತಿ ಹೊಂದಿ, ತದನಂತರ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ಪರಸ್ಪರ ಅಂತರ್ ವರ್ಗಾವಣೆ ಮೂಲಕ ವರ್ಗಾವಣೆ ಹೊಂದಿ, ರೋಣ ತಾಲ್ಲೂಕು, ಎಸ್.ವಿ.ವ್ಹಿ ಸಮಿತಿಯ ಎಸ್.ವ್ಹಿ ಪ್ರೌಢಶಾಲೆ, ಬೆಳವಣಕಿ, ಇಲ್ಲಿಗೆ ದಿನಾಂಕ:03/05/2006ರಂದು ಸೇವೆಗೆ ಹಾಜರಾಗಿರುತ್ತಾರೆ. ಸದರಿಯವರು ಸೇವೆಗೆ ಹಾಜರಾದ ದಿನಾಂಕದಿಂದ ಜೂನ್ 2010ರವರೆಗೆ ವೇತನವನ್ನು ಪಾವತಿ ಮಾಡಿರುತ್ತಾರೆ.

ಸದರಿಯವರು ಸತತವಾಗಿ ಕರ್ತವ್ಯಕ್ಕೆ ಗೈರು ಹಾಜರಾಗುವುದು, ಸಕಾಲದಲ್ಲಿ ಶಾಲೆಗೆ ಹಾಜರಾಗದೇ ಇರುವುದು, ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳೊಂದಿಗೆ ಸರಿಯಾಗಿ ನಡೆದುಕೊಂಡಿಲ್ಲದಿರುವುದು ಇತ್ಯಾದಿ ಕಾರಣಗಳಿಂದಾಗಿ ಆಡಳಿತ ಮಂಡಳಿಯವರು ದಿನಾಂಕ:12/06/2010 ರಿಂದ ಸದರಿಯವರನ್ನು ಸೇವೆಯಿಂದ ಅಮಾನತ್ತುಗೊಳಿಸಿರುತ್ತಾರೆ.

ಜುಲೈ 2010 ರಿಂದ ಸೆಪ್ಟೆಂಬರ್ 2010ರವರೆಗೆ ವೇತನ ರಹಿತ ರಜೆಯೆಂದು ಪರಿಗಣಿಸಿ ವೇತನ ಪಾವತಿಸಿರುವುದಿಲ್ಲ. ಮುಂದುವರೆದು ಅಕ್ಟೋಬರ್ 2010 ರಿಂದ ಡಿಸೆಂಬರ್ 2010ರವರೆಗೆ ಜೀವನಾಂಶಕ್ಕೆ ಅರ್ಧ ವೇತನ ಪಾವತಿ ಮಾಡಲಾಗಿರುತ್ತದೆ.

ಸದರಿ ನೌಕರರು ಶಾಲಾ ಕರ್ತವ್ಯಕ್ಕೆ ಅನಗತ್ಯವಾಗಿ ಗೈರು ಹಾಜರಾಗಿದ್ದು, ಜನವರಿ 2011 ರಿಂದ ಯಾವುದೇ ವೇತನ ಪಾವತಿ ಮಾಡಿರುವುದಿಲ್ಲ. ಈ ಕುರಿತು ಸದರಿಯವರ ಖಾಯಂ ವಿಳಾಸಕ್ಕೆ ಆಡಳಿತ ಮಂಡಳಿಯವರು ಅಂಚೆ ಮೂಲಕ ಹಾಗೂ ದೈನಂದಿನ ಪತ್ರಿಕೆಗಳಲ್ಲಿ ಹಲವು ಬಾರಿ ತಿಳುವಳಿಕೆ ನೋಟಿಸ್ಸು ನೀಡಿದಾಗಲೂ ಸದರಿಯವರು ಪತ್ರಗಳನ್ನು ಸ್ವೀಕರಿಸಿರುವುದಿಲ್ಲ.

ದಿನಾಂಕ:17/09/2011ರಂದು ಪ್ರಕರಣ ಇತ್ಯರ್ಥಪಡಿಸಲು ವಿಚಾರಣೆ ಸಮಿತಿಯ ಮುಂದೆ ಹಾಜರಾಗುವಂತೆ ಸೂಚಿಸಿ ಆಡಳಿತ ಮಂಡಳಿಯವರು ನೋಟಿಸ್ಸು ನೀಡಿರುತ್ತಾರೆ. ಆದರೂ ಸದರಿಯವರು ಪ್ರತಿ ಸ್ವೀಕರಿಸದೇ ಗೈರು ಹಾಜರಾಗಿರುತ್ತಾರೆ.

ಸದರಿ ನೌಕರರ ಆರೋಪಗಳ ಕುರಿತಂತೆ ವಿಚಾರಣಾ ಸಮಿತಿಯನ್ನು ಆಡಳಿತ ಮಂಡಳಿಯವರು ನೇಮಕ ಮಾಡಿದ್ದು, ಸದರಿ ಸಮಿತಿಯು ಆರೋಪಗಳು ಸಾಬೀತಾಗಿದೆಯೆಂದು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತದೆ.

ದಿನಾಂಕ:08/09/2012ರ ದಿನಪತ್ರಿಕೆಯ ಮೂಲಕ ನೋಟಿಸ್ಸು ನೀಡಿ ವಿಚಾರಣಾಧಿಕಾರಿಗಳ ವರದಿಯ ಆಧಾರದ ಮೇಲೆ ಸದರಿಯವರನ್ನು ಸೇವೆಯಿಂದ ಕಡ್ಡಾಯವಾಗಿ ನಿವೃತ್ತಿಗೊಳಿಸಲು ದಿನಾಂಕ:10/09/2012ರಂದು ಆಡಳಿತ ಮಂಡಳಿಯ ಸಭೆಯಲ್ಲಿ ತೀರ್ಮಾನವಾಗಿರುತ್ತದೆ.

ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1999 ನಿಯಮ 2(1)ರಡಿ ನಿಯಮದ ಅವಕಾಶದನ್ವಯ ಆಯಾಯ ಆಡಳಿತ ಮಂಡಳಿಯು ಶಿಸ್ತಿನ ಕ್ರಮವನ್ನು ಜರುಗಿಸಲು ಅವಕಾಶ ಕಲ್ಪಿಸಲಾಗಿದೆ. ಆದರಂತೆ ಸದರಿಯವರನ್ನು ಆಡಳಿತ ಮಂಡಳಿಯು ದಿನಾಂಕ:15/02/2013ರಂದು ಕಡ್ಡಾಯ ನಿವೃತ್ತಿಗೊಳಿಸಿರುತ್ತದೆ.

ಈ ಕ್ರಮವನ್ನು ಪ್ರಶ್ನಿಸುತ್ತಾ, ಸದರಿಯವರು ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಂಖ್ಯೆ:16/2010-2011ನ್ನು ಸಲ್ಲಿಸಿದ್ದು, ದಿನಾಂಕ: 28/04/2011ರಂದು ಮೇಲ್ಮನವಿಯನ್ನು ಹಿಂದಕ್ಕೆ ಪಡೆಯುವುದಾಗಿ ಪ್ರಮಾಣ ಪತ್ರ ಸಲ್ಲಿಸಿದ್ದರಿಂದ, ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ರವರು ಸದರಿಯವರ ಮೇಲ್ಮನವಿಯನ್ನು ವಜಾಗೊಳಿಸಿರುತ್ತಾರೆ.

101-141
...72
...DFA/1249518
5088



ಮುಂದುವರೆದು, ಸದರಿ ನೌಕರರು ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಇಲ್ಲಿ ರಿಟ್ ಅರ್ಜಿ ಸಂಖ್ಯೆ: 65230/2011ನ್ನು ದಾಖಲಿಸಿದ್ದು, ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ. ಆದುದರಿಂದ, ಮಾನ್ಯ ನ್ಯಾಯಾಲಯವು ನೀಡುವ ಆದೇಶವನ್ನು ಆಧರಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಇಪಿ 92 ಎಸ್‌ಓಹೆಚ್ 2022

(ಎಸ್. ಮಧುಬಂಗಾರಪ್ಪ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಸಚಿವರು.

ಎಸ್. ಮಧು ಬಂಗಾರಪ್ಪ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು
ಹಾಗೂ ಶಿವಮೊಗ್ಗ ಜಿಲ್ಲಾ
ಉಸ್ತುವಾರಿ ಸಚಿವರು



Generated from eOffice by MADHU BANGARAPPA, MIN-SCHOOLEDU(MB), MINISTER, EP-Sec on 22/08/2023 05:41 PM